ಶ್ರೀ ಬಿ. ಎಸ್. ಯಡಿಯೂರಪ್ಪ.—ಬೇರೆ ರೀತಿಯ ಯಾವುದೇ ತನಿಖೆ ಬೇಡ. ಸದನದ ಸಮಿತಿಯನ್ನು ಮಾಡಿ. ಲಕ್ಷಾಂತರ ಜನರು ಇವತ್ತು ನೋಡುತ್ತಿದ್ದಾರೆ. ಜನರಿಗೂ ಸತ್ಯ ಗೊತ್ತಾಗಲಿ.

ಶ್ರೀ ಬಿ. ರಾಚಯ್ಯ.—ಅತ್ಯಾಚಾರದ ವಿಚಾರ ಬಂದಾಗ ದಲಿತರ ಹೆಸರು ತರುತ್ತಾರೆ. ಯಾವುದೇ ವಿಷಯ ಬಂದರೂ ದಲಿತರ ಹೆಸರು ತರುತ್ತಾರೆ. ಈ ರೀತಿ ದಲಿತರ ಹೆಸರುಗಳನ್ನು ಹೇಳಿ ಮಾನ್ಯ ಸದಸ್ಯರುಗಳ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಶಿಕಾರಿಪುರದಲ್ಲಿ ಎಷ್ಟು ಅರಣ್ಯ ಲೂಟಿ ಆಗಿದೆ ಎಂಬ ಬಗ್ಗೆ ಹೇಳಿದರೆ ನಿಮಗೆ ಗೊತ್ತಾಗುತ್ತದೆ. ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕತೆಯಿಂದ ತನ್ನ ಪ್ರಾಣದ ಹಂಗನ್ನೇ ತೊರೆದು ಯಾವ ರೀತಿ ಈ ಅಧಿಕಾರಿ ಕೆಲಸ ಮಾಡಿದ್ದಾರೆ. ಇಂಥ ಒಳ್ಳೆಯ ಅಧಿಕಾರಿಯ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹ ಕೊಡದಿದ್ದರೆ ಸರ್ಕಾರ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ನಿಜವಾಗಿ ಅವನು ತಪ್ಪಿತಸ್ಥ ಎಂದು ತನಿಖೆಯಲ್ಲಿ ಗೊತ್ತಾದರೆ ಅವನನ್ನು ಡಿಸ್ಮಿಸ್ ಮಾಡುವುದಕ್ಕೂ ನಾನು ತಯಾರಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಮುಂಭಾಗದಲ್ಲಿರುವ ಅವರಣದೊಳಗೆ ಪ್ರವೇಶ ಮಾಡಿದರು.)

ಅಧ್ಯಕ್ಷರು.—ನೀವು ನಿಮ್ಮ ಜಾಗಕ್ಕೆ ಹೋಗಿ.

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು ಗಮನ ಸೆಳೆಯುವ ಸೂಚನೆಯು ವಾಪಸ್ಸಾತಿ ವಾಯಿತು. ಮಾನ್ಯ ಎಂ.ಎಸ್. ನಾರಾಯಣರಾವ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿ.

(ಈ ಹಂತದಲ್ಲಿ ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮಾತನಾಡುವುದನ್ನು ರೆಕಾರ್ಡ್ ಮಾಡಿಕೊಳ್ಳಬೇಡಿರಿಂತೆ ಅಧ್ಯಕ್ಷರು ಆದೇಶಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸರಕಾರದಲ್ಲಿ ದಲಿತರಿಗೆ ನ್ಯಾಯ ಸಿಗುತ್ತಾ ಇಲ್ಲ, ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಏಯ್ಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆ.

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಏಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಸರಿಸುಮಾರು ೧೨೦ ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆಯ ಬಗ್ಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಏಡ್ಸ್ ರೋಗಾಣುಗಳು ಅಂದರೆ ಏಡ್ಸ್ ವೈರಸ್‌ನಿಂದ ಕೂಡಿದ ಔಷಧಿಗಳು ಕರ್ನಾಟಕದಲ್ಲಿ ಮಾರಾಟವಾಗಿರುವುದು ನಿಜವಾದ ಸಂಗತಿಯಲ್ಲ. ಕರ್ನಾಟಕ ರಾಜ್ಯದ ಹೊರಗಡೆ ತಯಾರಿಸಲ್ಪಟ್ಟಿರುವ ಏಡ್ಸ್ "ಅಂಟಿಬಾಡಿನಿಂದ" ಕೂಡಿದ ಇಮ್ಯಾನೊ ಗ್ಲೂಬುಲಿನ್ಸ್ ಮತ್ತು ಸೀರಮಬೇಸ್ಡ್ ಔಷಧಿಗಳು ಮಾರಾಟವಾಗಿರುವುದು ಜನವರಿ ೧೯೮೯ರಲ್ಲಿ ವರದಿಯಾಗಿದೆ. ದೋಷಯುಕ್ತವಾದ ಈ ಔಷಧಿಗಳನ್ನು ಮಾರಾಟವನ್ನು ಪ್ರತಿಬಂಧಿಸಲು ಹಾಗೂ ಇಂತಹ ಔಷಧಿ

ಗಳನ್ನು ಸರ್ಕಾರ ವಶಪಡಿಸಿಕೊಳ್ಳಲು ಔಷಧ ನಿಯಂತ್ರಕರು ಕೂಡಲೇ ಕ್ರಮ ತೆಗೆದುಕೊಂಡಿದ್ದಾರೆ. ದೋಷಾಯುಕ್ತವಾದ ಳಿಖಿ ಈ ಔಷಧಿಗಳ ವೈಲ್ಸ್ ಪೈಕಿ ಇಲ್ಲಿಯವರೆಗೆ ೧೪೨ ವೈಲ್ಸ್‌ಗಳನ್ನು ವಶಪಡಿಸಿಕೊಂಡಿದ್ದು ಉಳಿದವುಗಳನ್ನು ಪತ್ತೆ ಹಚ್ಚುವ ಕ್ರಮ ತೆಗೆದುಕೊಳ್ಳಲಾಗಿದೆ. ಯಾರು ಯಾರು ಈ ಔಷಧಿಗಳನ್ನು ಪಡೆದಿದ್ದಾರೋ ಅವರನ್ನು ವಿಕ್ಟೋರಿಯಾ ಆಸ್ಪತ್ರೆಯ ಏಡ್ಸ್ ಸರ್ವೆಲೈನ್ಸ್ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಲು ಸೂಚನೆಯನ್ನು ಕೂಡ ನೀಡಲಾಗಿದೆ. ಈ ದೋಷಾಯುಕ್ತ ಔಷಧಿಯನ್ನು ಉಪಯೋಗಿಸಿದ ವ್ಯಕ್ತಿಗಳ ಪೈಕಿ ೨೦ ಜನರನ್ನು ಏಡ್ಸ್ ರೋಗ ಪರೀಕ್ಷೆಗೆ ಒಳಪಡಿಸಲಾಗಿದೆ. ಅವರ ಪೈಕಿ ಯಾರ ರಕ್ತದಲ್ಲಿಯೂ ಏಡ್ಸ್ ಅಂಟಿಬಾಡಿಗಳು ಇದ್ದದ್ದು ಕಂಡುಬಂದಿಲ್ಲ. ಈ ಔಷಧವನ್ನು ೧೨೦೦ ಮಹಿಳೆಯರಿಗೆ ನೀಡಿರುವ ಮಾಹಿತಿ ಸತ್ಯಕ್ಕೆ ದೂರವಾಗಿದೆ. ಈ ರೋಗದ ಬಗ್ಗೆ ಸರ್ಕಾರವು ತನ್ನ ತೀವ್ರ ಗಮನವನ್ನು ವಹಿಸಲಾಗುತ್ತಿದೆ ಮತ್ತು ಇದನ್ನು ತಡೆಗಟ್ಟಲು ಸಂಪೂರ್ಣವಾದ ಕಾರ್ಯಕ್ರಮವನ್ನು ಕೈಗೊಂಡಿದೆ.

ಇನ್ನೂ ಆರು ಹೆಚ್ಚಿನ ಸರ್ವೆಲನ್ಸ್ ಕೇಂದ್ರಗಳನ್ನು ೭೫ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒದಗಿಸಲು ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಒಂದು ಯೋಜನೆಯನ್ನು ಕಳುಹಿಸಲಾಗಿದೆ.

ಶ್ರೀ ಎಂ. ಎಸ್. ನಾರಾಯಣರಾವ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಏಡ್ಸ್‌ವೈರಸ್‌ನಿಂದ ಕೂಡಿದ ಔಷಧಿಯನ್ನು ೧೨೦೦ ಮಹಿಳೆಯರಿಗೆ ಕೊಟ್ಟಿರುವ ಸಂಗತಿ ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದಾರೆ. ಈ ರೀತಿಯಲ್ಲಿ ಮಾನ್ಯ ಸಚಿವರು ಕೊಟ್ಟ ಉತ್ತರವೂ ಕೂಡ ಸತ್ಯಕ್ಕೆ ದೂರುವಾದುದು ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಹಾರಾಷ್ಟ್ರ ರಾಜ್ಯದ ಆ ಮೂರು ಔಷಧಿ ತಯಾರಿಕೆ ಕಂಪನಿಗಳಿಂದ ಎಷ್ಟು ಮೌಲ್ಯದ ಔಷಧಿಗಳು ಕರ್ನಾಟಕ ರಾಜ್ಯಕ್ಕೆ ಬಂತು ? ಆದರಲ್ಲಿ ಎಷ್ಟನ್ನು ನೀವು ರಾಜ್ಯದಲ್ಲಿ ಸೀಸ್ ಮಾಡಿದ್ದೀರಿ ? ಎಷ್ಟು ಔಷಧಿ ಪೂರ್ತಿಕೆಯಾದುದನ್ನು ಪತ್ತೆ ಹಚ್ಚುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ದಯಮಾಡಿ ಹೇಳಬೇಕು. ದೋಷಯುಕ್ತವಾದ ಈ ಔಷಧಿಗಳ ಮಾರಾಟವನ್ನು ಪ್ರತಿಬಂಧಿಸಲು ಹಾಗೂ ಇಂತಹ ಔಷಧಿಗಳನ್ನು ಸರಕಾರ ವಶಪಡಿಸಿಕೊಳ್ಳಲು ಔಷಧ ನಿಯಂತ್ರಕರು ತತ್‌ಕ್ಷಣ ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ ಡ್ರಗ್ಸ್ ಕಂಟ್ರೋಲರ್ ಯಾವಾಗ ಕ್ರಮ ತೆಗೆದುಕೊಂಡರು ? ಮಹಾರಾಷ್ಟ್ರ ಸರಕಾರದಿಂದ ಈ ಔಷಧಿಗಳ ಬಗ್ಗೆ ಸೂಚನೆ ಯಾವಾಗ ಬಂತು ? ಡ್ರಗ್ಸ್ ಕಂಟ್ರೋಲರ್ ಯಾವಾಗ ನೋಟಿಫಿಕೇಶನ್‌ನನ್ನು ಈ ಬಗ್ಗೆ ಹೊರಡಿಸಿದರು ? ಮತ್ತು ಇಂತಹ ರೋಗಾಣುಯುಕ್ತ ಲಸಿಕೆಗಳನ್ನು ಹೊರಡಿಸಿದ ಕಂಪನಿಗಳ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ದಯವಿಟ್ಟು ಹೇಳಬೇಕು. ಈ ವಿಚಾರಗಳ ಬಗ್ಗೆ ಸರಿಯಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ(ಹುಣಸೂರು).—ಮಾನ್ಯ ಮಂತ್ರಿಗಳು ಹೇಳಿಕೆಯಲ್ಲಿ ಕೊಟ್ಟಿರುವ ಮೊದಲನೇ ಸೆಂಟೆನ್ಸಿಗೂ ಎರಡನೇ ಸೆಂಟೆನ್ಸಿಗೂ ಇರುವ ಕಾಂಟ್ರಡಿಕ್ಷನ್ಸ್‌ನ್ನು ಅರ್ಥಮಾಡಿಕೊಂಡ ಹಾಗೆ ಕಾಣುವುದಿಲ್ಲ. ಮೊದಲನೆಯ ಸೆಂಟೆನ್ಸಿನಲ್ಲಿ ಕರ್ನಾಟಕದಲ್ಲಿ ಔಷಧಿ ಮಾರಾಟವಾಗಿಲ್ಲ ಎಂದು ಹೇಳಿ ಎರಡನೇ ವಾಕ್ಯದಲ್ಲಿ ಜನವರಿ ೧೯೮೯ರಲ್ಲಿ ರಾಜ್ಯದಲ್ಲಿ ಮಾರಾಟವಾಗಿದೆ ಎಂದು ಹೇಳಿದ್ದಾರೆ. ನಮ್ಮ ಸರ್ಕಾರದ ಆರೋಗ್ಯ ಕಾರ್ಯದರ್ಶಿಯವರೇ ಪತ್ರಿಕೆ ಹೇಳಿಕೆ ಕೊಟ್ಟು ಸದರಿ ಔಷಧಿ ಎಷ್ಟು ಯಾವ ರಾಜ್ಯದಿಂದ ಬಂದಿದೆ ಎಲ್ಲಿ ತಯಾರಾಯಿತು, ಎಂದು ಹೇಳಿದ್ದರೂ ರಾಜ್ಯದಲ್ಲಿ ಅದು ಮಾರಾಟವಾಗಲೇ ಇಲ್ಲ ಎಂದು ಹೇಳುವುದು ನಿಜವಲ್ಲ. ಸರ್ಕಾರದ ಅಧಿಕಾರಿಗಳು ಸತ್ಯವಲ್ಲದ ಆಂಶಗಳನ್ನು ಮಂತ್ರಿಗಳ ಬಾಯಿಂದ ಹೇಳಿಸಿದ್ದಾರೆ ಏಡ್ಸ್ ರೋಗವನ್ನು ನಮ್ಮ ಸರ್ಕಾರ ಬಹಳ ಲಘುವಾಗಿ ತೆಗೆದುಕೊಂಡ ಹಾಗೆ ಕಾಣುತ್ತದೆ ಒಂದು ರಾಜ್ಯದಲ್ಲಿ ಪರದೇಶದಿಂದ ಬಂದಿರುವ ಶತ್ರುಗಳನ್ನು ಓಡಿಸಿ ರಾಜ್ಯ ರಕ್ಷಣೆ ಮಾಡಬೇಕಾದರೆ ಅದಕ್ಕೆ ಸೈನಿಕರು ಪೋಲಿಸರು ಮುಂತಾದವರಿರುತ್ತಾರೆ, ಒಂದು ಪಕ್ಷ ಇವರಾರೂ ಇಲ್ಲದಿದ್ದರೆ ಶತ್ರುಗಳು ಧಾಳಿ ಮಾಡಿದರೆ ನಮ್ಮ ರಾಜ್ಯದ ಪರಿಸ್ಥಿತಿ ಏನಾಗುತ್ತದೆಯೋ ಆ ಸ್ಥಿತಿ ನಮ್ಮ ದೇಹದ್ದಾಗುತ್ತದೆ. ನಾವು ಉಸಿರು ಆಡುವ ಗಾಳಿಯಲ್ಲಿ ಸೇವಿಸುವ ಆಹಾರದಲ್ಲಿ ಎಲ್ಲಾ ಕಡೆ ಆ ರೋಗಾಣುಗಳಿವೆ, ಅವು ನಮ್ಮ ದೇಹವನ್ನು ಹೊಕ್ಕಾಗ ರಕ್ತದ ಬಿಳಿರಕ್ತಕಣಗಳು ಪೋಲಿಸರ ಕೆಲಸ ಮಾಡಿ ರೋಗಾಣುಗಳನ್ನು ಕೊಲ್ಲುತ್ತವೆ ಅವುಗಳ ಕೈಲಿ ಆ ಕೆಲಸ ಆಗದಿದ್ದರೆ ಏಡ್ಸ್ ಬರುತ್ತದೆ, ಆ ಏಡ್ಸ್‌ನ್ನು ನಡೆಗಟ್ಟುವ ಔಷಧಿ ಎಲ್ಲೂ ಇಲ್ಲ, ರೋಗ ಬಂದ ಮೇಲೆ ರೋಗಿ ಸಾಯುತ್ತಾನೆ. ಏಡ್ಸ್ ರೋಗಾಣುಗಳೂ ಸಹ ಸಾಮಾನ್ಯ ಮೈಕ್ರಾಸ್ಕೋಪಿನಲ್ಲಿ ಕಾಣುವುದಿಲ್ಲ. ಅವು ಆಕ್ರಮಣ ಮಾಡಿದಾಗ ಆಜನ್ಮ ಪ್ರತಿಬಂಧಕ ಮಾಡುವ ಆಂಟಿಬಯಾಟಿಕ್ಸ್ ಕೂಡ ನಮ್ಮಲ್ಲಿಲ್ಲ. ಇವರ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ನೋಡಿದ್ದೇವೆ. ನಾನು ೧೯೮೮ರಲ್ಲಿ ಆರೋಗ್ಯ ಸಚಿವನಾಗಿದ್ದಾಗ, ಕೇಂದ್ರ ಸರ್ಕಾರ ಇವರ ಬಗ್ಗೆ ತನಿಖೆ ಮಾಡಿ ಎಲ್ಲಾ ರಾಜ್ಯಗಳಲ್ಲೂ ಚಿಕಿತ್ಸಾ ಕೇಂದ್ರ ಮಾಡಬೇಕೆಂದು ಹೇಳಿದರೂ ಕೂಡ ಕೌನ್ಸಿಲ್ ಆಫ್

ಮೆಡಿಕಲ್ ರಿಸರ್ಚ್ ಸೆಂಟರಿನ ರಾಮಲಿಂಗಸ್ವಾಮಿಯವರು ಚಿಕಿತ್ಸಾ ಕೇಂದ್ರಕ್ಕಾಗಿ ನಮ್ಮ ರಾಜ್ಯಕ್ಕೆ ದುಡ್ಡು ಕೊಡುವುದಕ್ಕೆ ಆಗುವುದಿಲ್ಲ ಎಂದಿದ್ದರೂ ಕೂಡ ಇವರು ಕೇವಲ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ಸೆಂಟರ್ ತೆರೆದಿದ್ದರೇ ಹೊರತು ಬೇರೆ ಯಾವ ಕಡೆಯು ತೆರೆಯಲಿಲ್ಲ. ಇತ್ತೀಚೆಗೆ ಆರೋಗ್ಯ ಕಾರ್ಯದರ್ಶಿಗಳು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಸೆಂಟರೊಂದರಲ್ಲೇ ಎರಡು ತಿಂಗಳಲ್ಲಿ ೨೮೦೦ ಜನಕ್ಕಿಂತ ಹೆಚ್ಚು ಪರೀಕ್ಷೆಗಾಗಿ ಬಂದಿದ್ದರೆಂದು ಹೇಳಿದ್ದಾರೆ, ಆದರೂ ಇವರು ಬೇರೆ ಕಡೆ ಸೆಂಟರ್ಸ್‌ನ್ನು ತೆರೆದಿಲ್ಲ. ಮಾಡಿ ಎಂದರೆ ಕೇಂದ್ರದಿಂದ ೭೦ ಲಕ್ಷ ಫಂಡ್ಸ್‌ಗಾಗಿ ಕೇಳಿದ್ದೇವೆ, ಅದು ಕೇಂದ್ರದಿಂದಬಂದಮೇಲೆ ತೆರೆಯುತ್ತೇವೆ ಎನ್ನುತ್ತಾರೆ. ಏನುಸ್ವಾಮಿ, ಡ್ರಾಟ್, ಫ್ಲಡ್ಸ್‌ಬಂದರೆ ಕೇಂದ್ರದ ದುಡ್ಡು ಬಂದಮೇಲೆ ಪರಿಹಾರ ಕಾರ್ಯ ಕೈಗೊಳ್ತೇವೆ ಎಂದು ಕಾಯುತ್ತೀರಾ? ಮೊದಲು ಖರ್ಚು ಮಾಡಿ ಆ ಮೇಲೆಲ್ಲವಾ ಸ್ವಾಮಿ ಕೇಳುವುದು? ಇದು ಭಯಂಕರ ಖಾಯಿಲೇ. ಪತ್ರಿಕೆಗಳಲ್ಲಿ ಇದರ ಬಗ್ಗೆ ಬಂದಿದ್ದರೂ ಕೂಡ ಕ್ರಮ ಕೈಗೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ. ಕೇಂದ್ರದಿಂದ ದುಡ್ಡು ಬಂದರೆ ೬ ಕೇಂದ್ರ ತೆರೆಯುತ್ತೇವೆ ಎನ್ನುವುದು ಅರ್ಥವಿಲ್ಲದ ಮಾತು. ನಿಮಾನ್ಸ್‌ನಲ್ಲಿ ಬೌರಿಂಗ್‌ನಲ್ಲಿ, ತೆರೆಯುತ್ತೇವೆಂದು ಕಾರ್ಯದರ್ಶಿಗಳು ಹೇಳಿದ್ದಾರೆ. ಅಷ್ಟೇ ಅಲ್ಲ ಬಳ್ಳಾರಿ, ಮೈಸೂರು, ಬಿಜಾಪುರ, ಬೀದರ್, ಮಂಗಳೂರು ಮುಂತಾದ ಕಡೆಗಳಲ್ಲೆಲ್ಲಾ ಇವರು ಕೇಂದ್ರ ತೆರೆಯಬೇಕು. ಮತ್ತು ಈ ರೋಗವನ್ನು ತಡೆಗಟ್ಟಲು ಒಂದು ಕೋಟಿಯನ್ನು ಖರ್ಚು ಮಾಡಬೇಕು. ಕೇಂದ್ರ ಸರ್ಕಾರದಿಂದ ಬರುವ ಹಾಗಿದ್ದರೆ ಅದನ್ನು ರೀ ಇಂಬರ್ಸ್‌ಮಾಡಿಕೊಳ್ಳಿ. ಅಲ್ಲಿಂದ ಬಂದಾದ ಮೇಲೆ ಮಾಡುತ್ತೇವೆಂದು ಹೇಳತಕ್ಕಂಥಾದ್ದು ಒಪ್ಪತಕ್ಕಂತಹ ಕೆಲಸ ಅಲ್ಲ, ಅದು ಸರ್ಕಾರದ ವಿಫಲತೆಯನ್ನು, ನಿರ್ಲಕ್ಷ್ಯವನ್ನು ತೋರಿಸುತ್ತದೆ. ಯಾವ ರೀತಿ ಅದು ಹರಡುತ್ತದೆ ಎಂಬುದನ್ನು ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ವೇಶ್ಯೆಯರ ಸಂಗ, ಸಲಿಂಗದ ಮೂಲಕ, ಬ್ಲಡ್ ಡೊನೇಷನ್ ಕೊಟ್ಟತಕ್ಕಂಥದಿಂದ ಕೂಡ ಹರಡುತ್ತದೆ. ಬ್ಲಡ್ ಅನ್ನು ತೆಗೆದುಕೊಳ್ಳುವಾಗ ಸ್ಕ್ರೀನ್ ಮಾಡಿ ತೆಗೆದುಕೊಳ್ಳಬೇಕು.

ಶ್ರೀ ಎಂ.ಎಸ್. ಕೃಷ್ಣನ್ —ಮಾನ್ಯ ಮಂತ್ರಿಗಳಿಗೆ ಏಡ್ಸ್ ಎಂದರೆ ಗೊತ್ತಾ? ಪೂರ್ತಿ ಎ.ಐ.ಡಿ ಎಸ್ ಅಂದರೆ ಏನು ಎಂದು ಹೇಳಿ.

ಡಾ। ಹೆಚ್.ಎಲ್. ತಿಮ್ಮೇಗೌಡ.—ಏಡ್ಸ್ ಇರತಕ್ಕಂತಹ ಒಬ್ಬ ರೋಗಿಗೆ ಇಂಜೆಕ್ಷನ್ ಕೊಟ್ಟು ಅದರಿಂದ ಬೇರೆಯವರಿಗೆ ಇಂಜೆಕ್ಷನ್ ಕೊಟ್ಟರೆ ಅವರಿಗೂ ಕೂಡ ಬರುತ್ತದೆ. ಒಬ್ಬರಿಗೆ ಕೊಟ್ಟು ಅದನ್ನು ಡಿಸ್ಟ್ರಾಯ್ ಮಾಡ ಬೇಕು. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಕೇಳಿ ಬಯಸುತ್ತೇನೆ. ಮತ್ತು ಏಡ್ಸ್ ಬಾರದೇ ಇರುವ ರೀತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು.—ತಾವು ಭಾಷಣ ಮಾಡುತ್ತಿದ್ದೀರಿ. ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಡಾ। ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೯೮೮ರಲ್ಲಿ ಚಿಂಕಿ ರೋಗ ಬಂತು ಆಗ ಕೋಟ್ಯಾಂತರ ಜನರು ಸತ್ತರು ಆದೇ ರೀತಿಯಾಗಿ ಈಗಲೂ ಹಾಗೇ ಆಗಿ ಅದರಿಂದ ಜನಸಂಖ್ಯಾ ನಿಯಂತ್ರಣವಾಗಲೀ ಎಂಬ ಇಚ್ಛೆ ಸರಕಾರಕ್ಕಿದ್ದರೆ ಮಾಡಲೀ ನಾನು ಸಮ್ಮತಿ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ತಾವೂ ಕೂಡ ಮಂತ್ರಿಯಾಗಿದ್ದಿರಿ ಉದ್ದುದ್ದ ಭಾಷಣ ಮಾಡುವುದು ಸರಿಯಲ್ಲ. ಕ್ಲಾರಿಫಿಕೇಷನ್ ಅನ್ನು ಕೇಳಿ. ಏನು ಆಗಬೇಕೆಂಬುದನ್ನು ಕೇಳಿ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಇದನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳುತ್ತೇನೆ ವೇಶ್ಯೆಯರಿಗೆ ಚೀಟಿ ಕೊಡತಕ್ಕಂತಹ ಕೆಲಸ ಮಾಡುತ್ತೀರಾ? ಏಡ್ಸ್ ಬಂದಿರತಕ್ಕಂತಹವರಿಗೆ ಇಂಜೆಕ್ಷನ್ ಕೊಟ್ಟಂತಹ ಸಿರಿಂಜ್ ಅನ್ನು ನೊರಗೆ ಎಸೆಯತಕ್ಕಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ? ಬ್ಲಡ್ ಬ್ಯಾಂಕ್‌ಗಳಲ್ಲಿ ಬ್ಲಡ್ ಅನ್ನು ತೆಗೆದುಕೊಳ್ಳುವಾಗ ಸ್ಕ್ರೀನ್ ಮಾಡತಕ್ಕಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ? ಎಂಬುದನ್ನು ಹೇಳಬೇಕು. ಇದೆಲ್ಲವನ್ನೂ ಕೇಳಬೇಕೆಂದು ನಾನು ಕ್ವಶ್ಚನ್ ಮೆಂಟ್ ಮೋಷನ್ ಕಳಿಸಿದ್ದೆದು.

ಅಧ್ಯಕ್ಷರು.—ಅದು ಆಗುವುದಿಲ್ಲವೆಂದು ಕಾಲಿಂಗ್ ಅಟೆನ್ಷನ್‌ಗೆ ಕನ್‌ವರ್ಟ್ ಮಾಡಿದ್ದೇನೆ. ಅದರ ಮೇಲೆ ಭಾಷಣ ಮಾಡುತ್ತಿದ್ದಿರಿ.

(ಗೊಂದಲ)

ಶ್ರೀ ಬಿ. ಎ. ಜೀವಿಜಯ.—ಉತ್ತರದಲ್ಲಿ ಏನು ಇದೆ ಅವರಿಗೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಪತ್ರಿಕೆಯಲ್ಲಿ ಏನು ಹೇಳಿದ್ದಾರೆ ಅದಕ್ಕೂ ಕೂಡ ಇಲ್ಲಿ ಉತ್ತರ ಇಲ್ಲ. ಇನ್ನೊಂದು ದಿವಸ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ನಮ್ಮ ರಾಜ್ಯದಲ್ಲಿ ಈ

ಖಾಯಿಲೆ ಹರಡಿದ ಮೇಲೆ ಔಷಧಿ ಕೊಡುವುದಿಕ್ಕಾಗುವುದಿಲ್ಲ ಎಲ್ಲರೂ ಸಾಯುತ್ತಾರೆ. ಇದನ್ನು ಪರಿಶೀಲನೆ ಮಾಡತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಕಾಲಿಂಗ್ ಅಟೆನ್‌ಷನ್ ಮೂಲಕ ಕೇಳ ತಕ್ಕಂತಹ ಪ್ರಶ್ನೆ ಇದು ಅಲ್ಲ.

ಅಧ್ಯಕ್ಷರು.—ನಿಯಮಾವಳಿಗಳ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನೋಟೀಸ್‌ಕಳಿಸಿಕೊಡಿ.

ಡಾ| ಹೆಚ್. ಎಲ್. ತಿಮ್ಮೇಗೌಡ.—ಟಿ ಸೆಂಟರ್ ಮಾಡುತ್ತೇವೆ ಬಿ ಲಕ್ಷ ಕೇಳಿದ್ದೇವೆ ಅದು ಬಂದ ಮೇಲೆ ಮಾಡುತ್ತೇವೆಂದು ಹೇಳಿದರೆ ಅದು ಸರಕಾರದ ಬೇಜವಾಬ್ದಾರಿಯನ್ನು ತೋರಿಸುತ್ತದೆ.

ಶ್ರೀ ಜೆ. ಹೆಚ್. ಪಟೀಲ್.—ಉತ್ತರವನ್ನು ಅವರು ಕೊಡುತ್ತಾರೆ. This subject has drawn the attention of the entire world. It is considered as one of the pernicious diseases. (Interruptions) Let us not divert.

(ಗೊಂದಲ)

ಶ್ರೀ ಎನ್.ಎಸ್. ಬೇಡ್.—ನಿಮ್ಮ ಮಂತ್ರಿಗಳು ಮಾತನಾಡುತ್ತಿದ್ದಾರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಡಿ. ಬಸವರಾಜ್.—ಅಧ್ಯಕ್ಷರೇ,...

ಶ್ರೀ ಬಿ. ಎ. ಜೀವಿಜಯ.—ಎರಡನೇ ಬಾರಿ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿದಾಗ ತಮಗೆ ಮಂತ್ರಿಸ್ಥಾನವನ್ನು ಕೊಡುತ್ತಾರೆ, ಕುಳಿತುಕೊಳ್ಳಿ.

(ಗೊಂದಲ)

Sri J. H. Patel.—This is not a matter to be talked of very lightly. This is a matter which is before the entire world and countries like USA, UK are doing their best to find out remedy to cure this disease. As a doctor he knows it is right he has raised the subject. But Calling Attention has its own limitations. Through Call Attention we cannot discuss...

ಡಾ| ಹೆಚ್. ಎಲ್. ತಿಮ್ಮೇಗೌಡ.—ಅದಕ್ಕೋಸ್ಕರವಾಗಿ ಈ ವಿಷಯದ ಬಗ್ಗೆ ನಾವು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕೇಳಿದ್ದುದು.

Sri J. H. Patel.—It is alright for the day. This subject needs to be discussed and the remedy for this is still a mystery. I do not know which great scientist will find out the remedy. As a doctor, you know these things are being done. To prevent this pernicious, dangerous disease from spreading, as a Government we have our duty, We will take certain measures. We will try to contact the best possible scientist in the world. Apart from this, it is not just limited to the powers of the State Government. It is much beyond that.

ಶ್ರೀ ಬಿ. ಎ. ಜೀವಿಜಯ.— ಈಗ ೧೪೦೦ ಜನರಿಗೆ ಇನ್‌ಜಕ್ಷನ್ ಕೊಟ್ಟಿದ್ದಾರೆ. ಇವರ incubation ಪೀರಿಯಡ್ ಐದು ವರ್ಷ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ರೆಮಿಡಿಯಲ್ ಮೆಷರ್ಸ್‌ನ್ನು ತೆಗೆದುಕೊಳ್ಳದಿದ್ದರೆ ಎಷ್ಟೋ ಜನರ ಲೈಫ್ ಡೇಂಜರ್ಸ್ ಆಗುತ್ತದೆ.

Sri J. H. Patel. — I do agree that it is not possible to identify the victims. Some medicine curing something else may carry some viruses. the Government has to find out it Manufacturer of the

medicine is somewhere else. He came here and approched the doctors, doctors used it. It was later discovered that this so called serum contained viruses.

ಶ್ರೀ ಬಿ. ಎ. ಜೀವಿಜಯ.— ಸರ್ಕಾರ ರಿಪ್ಲೈಯಲ್ಲಿ ಏನೂ ಕೊಟ್ಟಿಲ್ಲ. ಇದರ ಬಗ್ಗೆ ಏನೂ ಹೇಳಿಲ್ಲ.

SRI J. H. PATEL.— I am only saying the thinking of the Government.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಪಟೇಲರು ಪಾರ್ಲಿಮೆಂಟ್‌ನಲ್ಲಿ ಕನ್ನಡದಲ್ಲಿ ಮಾತನಾಡುತ್ತಿದ್ದರು. ಇಲ್ಲಿ ಇಂಗ್ಲೀಷ್‌ನಲ್ಲಿ ಏತಕ್ಕೆ ಮಾತನಾಡುತ್ತಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್.— ಅದಕ್ಕೆ ಕಾರಣವನ್ನು ಹೇಳುತ್ತೇನೆ. "ಏಡ್ಸ್" ಇದು ಇಂಗ್ಲೀಷ್‌ದು. ಅದು ಕನ್ನಡದ್ದಲ್ಲ. ಈ ವಿಷಯದ ಚರ್ಚೆ ಮಾನ್ಯ ತಿಮ್ಮೇಗೌಡರು ಬೇರೆ ಸಮಯದಲ್ಲಿ ಮತ್ತು ಬೇರೆ ರೂಪದಲ್ಲಿ ತರಲಿ.

ಶ್ರೀ ಬಿ. ಎ. ಜೀವಿಜಯ.— ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದಾಗ ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿದ್ದಾರೆ.

SRI J. H. PATEL.— We do not say Government is omnipotent, or omniscient..... ನಾವು ಸರ್ವಜ್ಞರು ಎಂದು ಏನೂ ಹೇಳುವುದಿಲ್ಲ, ಇದರ ಬಗ್ಗೆ ಏನೂ ಮಾಡುವುದಕ್ಕೆ ಸಾಧ್ಯ ಇದೆ. ಅದು ರಾಜ್ಯ ಸರ್ಕಾರದ್ದು ಇರಬಹುದು ಅಥವಾ ಕೇಂದ್ರದ್ದು ಇರಬಹುದು, ಇದರ ಬಗ್ಗೆ ಡಾಕ್ಟರು ಏನು ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ದಯವಿಟ್ಟು ತಾವು ಹೇಳಿ. It will become fatal to the entire community. That is the dangerous potential of that disease. ಅದಕ್ಕೆ ತಾವು ಏನು ಸಲಹೆ ಕೊಟ್ಟಿರಿ ಆ ರೀತಿ ನಾವು ಸೆಂಟರ್ಸ್ ಮಾಡಿದ್ದೇವೆ. ಮಾಡುತ್ತೇವೆ.

2-30 P.M.

ಅಧ್ಯಕ್ಷರು.— ಓರ ನಿಯಮ ಪ್ರಕಾರ ನೋಟೀಸ್ ಕೊಡಿ.

ಶ್ರೀ ಜೆ. ಹೆಚ್. ಪಟೇಲ್.— ಲೈಂಗಿಕ ವ್ಯವಹಾರದಿಂದ ಮಾತ್ರ ಏಡ್ಸ್ ಬರುವುದಿಲ್ಲ. ಬ್ಲಡ್ ಡೊನೇಟ್ ಮಾಡಿದವರಿಂದ ಬರುತ್ತದೆ. ಇಂಜೆಕ್ಷನ್ ಸಿರಿಂಜ್ ಸರಿಯಾಗಿ ಸ್ಟರ್‌ಲೈಸ್ ಮಾಡದೇ ಇದ್ದರೆ ಬರುತ್ತದೆ. ಯಾರೋ ಬ್ಲಡ್ ಡೊನೇಟ್ ಮಾಡುವವನಿಗೆ ಏಡ್ಸ್ ಇರುತ್ತದೆ ಅವನು ಬ್ಲಡ್ ಕೊಟ್ಟಿರಿಂತ್ತಾನೆ. ಹಲವಾರು ಕಾರಣಗಳಿಂದ ಇದು ಬರುತ್ತದೆ. ಯಾರೋ ಒಬ್ಬ ಆಕ್ಸಿಡೆಂಟ್ ಆಗಿತ್ತು, ಬ್ಲಡ್ ಕೊಟ್ಟರು. ಏಡ್ಸ್ ಬಂತು. ಯಾರು ಬ್ಲಡ್ ಡೊನೇಟ್ ಮಾಡಿದನೋ ಗೊತ್ತಿಲ್ಲ, ಅವನು ಯಾವ ದೇಶದವನೋ ಗೊತ್ತಿಲ್ಲ. ಇದೆಲ್ಲಾ ಕಾರಣದಿಂದ ಸಮಗ್ರವಾಗಿ ಸರ್ಕಾರಕ್ಕೆ ಏನು ಮಾಡುವುದಕ್ಕೆ ಸಾಧ್ಯ ಇದೆ ? ಸಾರ್ವಜನಿಕರಿಗೆ ಇದರ ಬಗ್ಗೆ ಏನು ಹೇಳಬೇಕು ? ದಯವಿಟ್ಟು ಇದನ್ನು you bring a different motion under a different category. We will certainly listen.

ಅಧ್ಯಕ್ಷರು.—ಡಾ॥ ಶಿಪ್ಪೇಸ್ವಾಮಿಯವರೇ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಯು. ಭೂಪತಿ.— ಶಿಪ್ಪೇಸ್ವಾಮಿಯವರು ಈ ವಿಷಯಲ್ಲಿಯೇ ಇಲ್ಲ,

ಅಧ್ಯಕ್ಷರು.—ಡಾ. ತಿಮ್ಮೇಗೌಡರೇ, ಮತ್ತೊಮ್ಮೆ ಅವರು ಕೇಳಲಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಡಾ. ಎಚ್. ಎಲ್. ತಿಮ್ಮೇಗೌಡ.— ಬಸವರಾಜ್ ಅವರು...

ಅಧ್ಯಕ್ಷರು.— ಅವರ ವಿಚಾರ ಏಕೆ ತೆಗೆಯುತ್ತಿದ್ದೀರಿ. ತಾವು ದಯವಿಟ್ಟು ಕೇಳಿ. ಮಹತ್ವವಾದ ವಿಷಯ ಎಂದು ಓರ ನಿಯಮದ ಪ್ರಕಾರ ಅವಕಾಶ ಕೊಡುತ್ತೇನೆ. ಜೆ. ಎಚ್. ಪಟೇಲ್ ರವರೂ ಹೇಳಿದ್ದಾರೆ. ಓರ ನಿಯಮದ ಪ್ರಕಾರ ನೋಟೀಸ್ ಕೊಡಿ. ಚೀಫ್ ವಿಸಿಸ್ಪರ್‌ಗೆ ಹೇಳಿ ಒಂದು ದಿವಸ ಚರ್ಚೆ ಇಟ್ಟುಕೊಳ್ಳೋಣ.

ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಡಾ. ತಿಮ್ಮೇಗೌಡರು ಇದಕ್ಕೆ ಸಂಬಂಧಪಟ್ಟಂತೆ ಇನ್‌ಫರ್ಮೇಷನ್ ಯಾವಾಗ ಸಿಕ್ಕಿತು ಎಂದು ಕೇಳಿದ್ದಾರೆ. ೩೧.೧೯೯೯ರಲ್ಲಿ ಸಿಕ್ಕಿತು. ಎಲ್ಲಾ ಶಾಪ್ಸ್‌ಗಳಿಗೆ ೧.೨.೨೦೦೦ರಂದು ಒಂದು ಸರ್ಕ್ಯೂಲರ್ ಇಶ್ಯೂ ಮಾಡಿ ಈ ಡ್ರಗ್ಸ್ ಸೀಜ್ ಮಾಡಬೇಕೆಂದು, ಸ್ಟಾಕ್‌ಗಳನ್ನು ಇಡಬಾರದು ಎಂದು ತಿಳಿಸಿದ್ದೇವೆ. ಆವರು ಸೇಲ್ ಮಾಡಲಿಲ್ಲ. ಬೆಂಗಳೂರಿನಲ್ಲಿ ೧೯೦೦ ಜನ ಪ್ರೊಫೆಷನಲ್ ಬ್ಲಡ್ ಡೊನೇಟರ್ಸ್ ಇದ್ದಾರೆ ಅವರನ್ನು ಐಡೆಂಟಿಫೈಡ್ ಮಾಡಿ ಬ್ಲಡ್ ಸ್ಯಾಂಪಲ್ ತೆಗೆದುಕೊಂಡಿದ್ದೇವೆ. ಯಾರು ಬ್ಲಡ್ ಡೊನೇಟ್ ಮಾಡುತ್ತಾರೆ, ಅವರಿಗೆ ಟೋಕನ್ ಮಾಡಿ ಕಾರ್ಡ್ ಕೊಟ್ಟು ಅವರನ್ನು ಐಡೆಂಟಿಫೈ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈಗಾಗಲೇ ಟೆಲಿವಿಷನ್ ಮುಖಾಂತರವಾಗಲೀ, ರೇಡಿಯೋ ಮುಖಾಂತರವಾಗಲೀ ಅಥವಾ ಪೇಪರ್ ಮುಖಾಂತರವಾಗಲೀ ಪಬ್ಲಿಷ್ ಮಾಡಿ ತಲಾಶ್ ಮಾಡುತ್ತೇವೆ. ಆದರೂ ಸಹ ಸರ್ಕಾರಕ್ಕೆ ಇದರ ಬಗ್ಗೆ ಕಾಳಜಿ ಇಲ್ಲ, ಎಂದು ಹೇಳಿದ್ದಾರೆ. ಸರ್ಕಾರ ಕಾಳಜಿ ತೆಗೆದುಕೊಂಡಿದೆ. ಈಗ ಡಾ. ತಿಮ್ಮೇಗೌಡರು ಏನು ಸಲಹೆ ಮಾಡಿದಾರೆ, ಅದರ ವಿಷಯವಾಗಿ ನಮ್ಮ ಅಧಿಕಾರಿಗಳು ಬಂದಿದ್ದಾರೆ ಅವರ ಸಲಹೆಯನ್ನು ಕುರಿತು ಇನ್ನೊಮ್ಮೆ ಮಾತನಾಡುತ್ತೇನೆ. ದೇಶದ ಆಗುಹೋಗುಗಳ ದೃಷ್ಟಿಯಿಂದ ತಾವು ಏನು ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡಿದ್ದಾರೆ, ಅಂದರೆ ಈ ಕಾರಣ ಏಡ್ಸ್‌ನಿಂದ ಬಳಲುವವರನ್ನು ಬೇರೆ ಕಡೆ ಇಡಲು ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ. ಗೋವಾದಲ್ಲಿ ಇವರ ಬಗ್ಗೆ ಒಂದು ಕಾಯಿದೆಯನ್ನು ತಂದರು ನಮ್ಮಲ್ಲಿ ಕಾಯಿದೆ ಇರಲಾರದ ಕಾರಣ ನಾವು ಬೇರೆ ಕಡೆ ಇಡಬೇಕಾಗುತ್ತದೆ. ಆದಷ್ಟು ಬೇಗ ನಾವು ಕಾಯಿದೆಯನ್ನು ಜಾರಿಗೆ ತರುತ್ತೇವೆ. ಡಾಕ್ಟರ್‌ರವರು ಏನು ಸಲಹೆ ಕೊಟ್ಟಿದ್ದಾರೆ ಆ ಸಲಹೆಯನ್ನು ಗಣನೆಗೆ ತೆಗೆದುಕೊಂಡು, ಆ ಸಲಹೆ ಬಗ್ಗೆ ಗಮನ ಕೊಡಲಾಗುತ್ತದೆ.

ಶ್ರೀ ಬಿ. ಎ. ಜೀವಿಜಯ.— ಕೇಂದ್ರ ಸರ್ಕಾರದವರ ಹತ್ತಿರ ಸಿಗುವವರೆಗೆ ಇವರು ಏನು ರೆಮಿಡಿಯಲ್ ಮೆಷರ್ಸ್ ತೆಗೆದುಕೊಳ್ಳುತ್ತಾರೆ, ಇದಕ್ಕೆ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.— ಓರ್ ನಿಯಮದ ಪ್ರಕಾರ ನೋಟೀಸ್ ಕೊಡಿ. ತಿದು ಬಹಳ ಮಹತ್ವದ ವಿಷಯ. ಓರ್ ನಿಯಮದ ಪ್ರಕಾರ ನಾಳೆ ಅಥವಾ ನಾಡಿದ್ದು ಚರ್ಚೆಗೆ ಇಡೋಣ. ಈಗ ನಿಯಮ ೩೫ರ ಮೇರೆಗೆ ಚರ್ಚೆ.

ನಿಯಮ ೩೫ರ ಮೇರೆಗೆ

೧) ಉಡುಪಿಯಲ್ಲಿ ಆಟೋರಿಕ್ಷಾ ಚಾಲಕರಿಗೆ ಹೊಸ ಮೀಟರುಗಳನ್ನು ಅಳವಡಿಸಲು ಕಾಲಾವಧಿಯ ವಿಸ್ತರಣೆ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).— ಮಾನ್ಯ ಅಧ್ಯಕ್ಷರೆ, ಉಡುಪಿಯಲ್ಲಿ ರಿಕ್ಷಾ ಚಾಲಕರಿಗೆ ಹೊಸ ಮೀಟರ್‌ನ್ನು ಅಳವಡಿಸುವಂತೆ ಆದೇಶಿಸಲಾಗಿದ್ದು ಅದಕ್ಕೆ ಸಾಕಷ್ಟು ಸಮಯವನ್ನೂ ನೀಡಿರುವುದಿಲ್ಲ. ಅಲ್ಲದೆ, ಮೀಟರ್ ಮೇರೆಗೆ ನಡೆಸಿದರೆ ಉಡುಪಿಯಂತಹ ಸ್ಥಳದಲ್ಲಿ ಹಾಗೂ ತಾಲ್ಲೂಕಿನ ಇತರೆಡೆಗಳಲ್ಲಿ ಬ್ಯಾಂಕಿಗೆ ಬಡ್ಡಿ, ಪೆಟ್ರೋಲ್, ಆಯಿಲ್, ಇತ್ಯಾದಿಗಳಿಗೆ ಕೊಟ್ಟು ಉಳಿಯುವ ಹಣ ದಿನವೊಂದಕ್ಕೆ ಐವತ್ತು ಪೈಸೆಗಳಿಂದು ಲೆಕ್ಕಹಾಕಿದ್ದಾರೆ. ಅಲ್ಲದೆ ಕನಿಷ್ಠ ೩ ರೂಪಾಯಿಗಳನ್ನೂ, ೬ ರೂಪಾಯಿಗಳ ವೇಟಿಂಗ್ ಚಾರ್ಜ್ ಹಾಗೂ ಕಿಲೋಮೀಟರಿಗೆ ೨ ರೂಪಾಯಿಗಳಂತೆ ವಿಧಿಸಲು ಅನುಮತಿ ನೀಡಬೇಕೆಂದು ಉಡುಪಿ ರಿಕ್ಷಾ ಚಾಲಕರು ಹಾಗೂ ಮಾಲೀಕರ ಸಂಘದವರು ಮನವಿ ಮಾಡಿಕೊಂಡಿದ್ದಾರೆ. ಇವರ ಮನವಿ ನ್ಯಾಯವಾಗಿದ್ದು ಸದರಿ ಮನವಿಯ ಬಗ್ಗೆ ಸರಕಾರದವರು ಪರ್ಯಾಲೋಚಿಸಿ ಅದರಂತೆ ಆದೇಶ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಸಾರಿಗೆ ಸಚಿವರು).— ಉಡುಪಿಯೂ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಟೋರಿಕ್ಷಾದವರಿಗೆ ಫ್ಲಾಗ್ ಮೀಟರುಗಳನ್ನು ಅಳವಡಿಸಲು ಇನ್ನಷ್ಟು ಕಾಲಾವಕಾಶವನ್ನು ನೀಡುವಂತೆ ಸೂಚನೆ ನೀಡಲಾಗುತ್ತಿದೆ. ಪ್ರಯಾಣಿಕರ ಹಾಗೂ ಆಟೋರಿಕ್ಷಾ ಚಾಲಕರ, ಮಾಲೀಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆಟೋರಿಕ್ಷಾ ಪ್ರಯಾಣ ದರಗಳನ್ನು ಪರಿಷ್ಕರಿಸಿ ೧.೪.೧೯೯೯ರಿಂದ ಜಾರಿಗೆ ತರಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.